ಇದೆ. ಆದರೆ ನಾನು ಹೇಳುತ್ತಿದ್ದೇನೆ ವಾಡಿ ಪಟ್ಟಣದ ಮೇಲೆ ಧೂಳು ಬೀಳಲಾರದ ಹಾಗೆ ಕಠಿಣವಾದ ಆದೇಶವನ್ನು ತಾವು ಕೊಡುತ್ತೀರಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಸದಸ್ಯರು ವ್ಯಕ್ತಪಡಿಸಿತಕ್ಕ ಆತಂಕ ನನಗೆ ಮನವರಿಕೆಯಾಗಿದೆ. ಆದರೆ ಧೂಳು ನಿಯಂತ್ರಣ ಮಾಡತಕ್ಕದ್ದರ ಬಗ್ಗೆ ಟ್ರೀಟ್‌ಮೆಂಟ್ ಪ್ಲಾಂಟ್ ಇಡುತ್ತಾರೆ. ಅದನ್ನು ಅವರು ಅಲ್ಲಿ ಇನ್ನೂ ಅಳವಡಿಸಿಲ್ಲ. ಅಲ್ಲಿ ಮತ್ತು ಬೇರೆಕಡೆ ಅಳವಡಿಸಬೇಕು ಎಂದು ಆದೇಶ ಕೊಡುತ್ತಿದ್ದೇವೆ. ಪ್ರಿಸಿಪಿಟೇಟರ್ಸ್ ಎಂದು ಧೂಳನ್ನು ನೀರು ಮಾಡಿ ನೆಲಕ್ಕೆ ಕೆಡವತಕ್ಕ ಯಂತ್ರ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಸ್ವಲ್ಪ ಟೈಂ ಕೊಡಿ. ನಾನು ಸ್ಥಳಕ್ಕೆ ಹೋಗಿ ನೋಡುತ್ತೇನೆ.

ಶ್ರೀ ಬಾಬುರಾವ್ ಚವಾಣ್:- ಎಷ್ಟು ದಿವಸದಲ್ಲಿ ಮಾಡಿಕೊಡುತ್ತೀರಿ?

ಶ್ರೀ ಬಿ. ಬಸವಲಿಂಗಪ್ಪ:- ಒಂದು ತಿಂಗಳಾಗಬಹುದು.

ಶ್ರೀ ಬಾಬುರಾವ್ ಚವಾಣ್:- ನಿಮ್ಮ ಆದೇಶವನ್ನು ಪಾಲನೆ ಮಾಡದೇ ಇದ್ದರೆ ಅವರಿಗೆ ನೀರು, ಲೈಟು ಮತ್ತು ಮೈನ್ಸ್‌ನಿಂದ ಕೊಡತಕ್ಕ ಕಲ್ಲು ಸ್ಟಾಪ್ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ:- ಒಂದು ತಿಂಗಳು ತಡೆಯಿರಿ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪಶು ಚಿಕಿತ್ಸಾಲಯಗಳ ಮೇಲ್ದರ್ಜೀಕರಣ

೩೫೪(೧೯೯)ಶ್ರೀ ವಸಂತ ವಿ. ಸಾಲ್ಯಾನ (ಕಾಪು) ಪರವಾಗಿ ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ):- ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ಎಷ್ಟು ಗ್ರಾಮೀಣ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ ಮತ್ತು ಇವುಗಳಿಗೆ ಸರ್ಕಾರದ ಮಂಜೂರಾತಿ ದೊರೆತಿದೆಯೇ?

ಆ) ಆವುಗಳಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸಲಾಗಿದೆಯೇ?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನಾ ಪಶುವೈದ್ಯ ಸೇವಾ ಸಚಿವರು):-

ಅ) ೧೯೮೮-೮೯ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ ವತಿಯಿಂದ ೮ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಯಿತು. ಆದರೆ ಇದಕ್ಕೆ ಸರ್ಕಾರದ ಮಂಜೂರಾತಿ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ (ಶ್ರೀ ವಸಂತ ಸಾಲಿಯಾನ ಅವರ ಪರವಾಗಿ):- ಮೊದಲನೆ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಜಿಲ್ಲಾ ಪರಿಷತ್ತಿನವರು ಮಂಜೂರು ಮಾಡಿದಂಥ ಪಶು ಚಿಕಿತ್ಸಾಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಯಿತು, ಆದರೆ ಇದಕ್ಕೆ ಸರ್ಕಾರದ ಮಂಜೂರಾತಿ ನೀಡಿರುವುದಿಲ್ಲ ಎಂದುಹೇಳಿದ್ದಾರೆ. ಜಿಲ್ಲಾ ಪರಿಷತ್ತಿನವರು ಆ ಕೇಂದ್ರಗಳನ್ನು ಪರಿಶೀಲಿಸಿ ಅವುಗಳನ್ನು ಮೇಲ್ದರ್ಜೆಗೇರಿಸಿದ್ದಾರೆ ಜನತೆಗೆ ನಾವೆಲ್ಲಾ ಆಶ್ವಾಸನೆ ಕೊಟ್ಟಿದ್ದೇವೆ.

ಕೆಲವು ಕಡೆಗಳಲ್ಲಿ ಜಿಲ್ಲಾ ಪರಿಷತ್ತಿನವರೇ ಅವುಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಆದರೆ ಈಗ ಬೇಕಾದಂಥ ಅನುಕೂಲತೆಗಳು ಸಿಕ್ಕದೆ ಆ ಜನ ನಮ್ಮನ್ನು ದೂರುವಂಥ ಪರಿಸ್ಥಿತಿ ಬಂದಿದೆ. ಮುಂದಿನ ವರ್ಷವಾದರೂ ಯೋಜಿತ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಸೂಕ್ತ ಆಜ್ಞೆ ತಾವು ಕೊಡುತ್ತೀರೆಂದು ನಾನು ಆಶಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಜಿಲ್ಲಾ ಪರಿಷತ್ತಿನಿಂದ ಮಾಡಿದಂಥ ಅಥವಾ ಮೇಲ್ದರ್ಜೆಗೇರಿಸಿದಂಥ ಆಸ್ಪತ್ರೆಗಳನ್ನು ಸರ್ಕಾರದಿಂದ ಮಂಜೂರು ಮಾಡಿ ಅದಕ್ಕೆ ಸೌಲಭ್ಯಗಳು ಒದಗಿಸುತ್ತೀರಾ ಎಂದು ಕೇಳಿದ್ದಾರೆ. ಈಗಾಗಲೇ ಜಿಲ್ಲಾ ಪರಿಷತ್ತಿನವರು ಮಾಡಿರುವ ಆಸ್ಪತ್ರೆಗಳಿಗೆ ಸೌಲಭ್ಯಗಳನ್ನು ಒದಗಿಸಬೇಕು ಎಂದು ಬಹಳ ಕಳಕಳಿಯಿಂದ ಕೇಳಿಕೊಳ್ಳುತಿದ್ದಾರೆ. ಮಾನ್ಯ ಸದಸ್ಯರಷ್ಟೇ ಕಾಳಜಿ ನನಗೂ ಇದೆ. ಆದರೂ ಕಾನೂನು ಪ್ರಕಾರ ಎಲ್ಲೆಲ್ಲಿ ಮೇಲ್ದರ್ಜೆಗೆ ಏರಿಸುವುದಕ್ಕೆ ಸಾಧ್ಯವಿದೆಯೋ ಅದನ್ನು ನಮ್ಮ ಹಣಕಾಸಿನ ಪರಿಸ್ಥಿಗೆ ಅನುಗುಣವಾಗಿ, ಯಾವಾಗ ಮಾಡಲಿಕ್ಕೆ ಸಾಧ್ಯವಿದೆಯೋ ಆದಷ್ಟು ಬೇಗನೆ ಸೂಕ್ತ ಕ್ರಮ ತೆಗೆದುಕೊಳ್ಳಲು ವಿಚಾರ ಮಾಡಲಾಗುತ್ತದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ರಾಮನಗರ ತಾಲ್ಲೂಕಿನಲ್ಲಿ ಕರಡಿಗಳ ಹಾವಳಿ

೩೫೫(೨೧೪೨)ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಮನಗರ ತಾಲ್ಲೂಕಿನಲ್ಲಿ ಈವರೆವಿಗೂ ಕರಡಿಗಳ ಆಕ್ರಮಣಕ್ಕೆ ಒಳಗಾದ ಜನರ ಸಂಖ್ಯೆ ಎಷ್ಟು;

ಆ) ಹಾನಿಗೀಡಾದ ವಿವಿಧ ಬೆಳೆಗಳ ಜಮೀನಿನ ವಿಸ್ತೀರ್ಣವೆಷ್ಟು;

ಇ) ಇದುವರೆವಿಗೂ ಆಕ್ರಮಣಕ್ಕೊಳಗಾದ ಜನರಿಗೆ ಮತ್ತು ಹಾನಿಗೀಡಾದ ಬೆಳೆಗಳಿಗೆ ಸರ್ಕಾರವು ಪರಿಹಾರ ನೀಡದಿರಲು ಕಾರಣವೇನು?

ಶ್ರೀ ಈಟಿ ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):-

ಅ) ೧೯೯೧-೯೨ನೇ ಸಾಲಿನಲ್ಲಿ ರಾಮನಗರ ತಾಲ್ಲೂಕಿನಲ್ಲಿ ೧೦ ಜನರು ಕರಡಿಯ ಆಕ್ರಮಣಕ್ಕೆ ಒಳಗಾಗಿದ್ದಾರೆ.

ಆ) ಕಬ್ಬು - ೭.೫ ಎಕರೆ ಮತ್ತು ಕಡಲೆ ೧.೦ ಎಕರೆ, ಒಟ್ಟು ೮.೫ ಎಕರೆ.

ಇ) ಕರಡಿಯಿಂದ ಆಕ್ರಮಣಕ್ಕೊಳಗಾದ ಜನರಿಗೆ ಮತ್ತು ಬೆಳೆ ನಷ್ಟಗಳ ಎಲ್ಲಾ ಪ್ರಕರಣಗಳಲ್ಲಿಯೂ ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಸಿ. ಎಂ ಲಿಂಗಪ್ಪ:- ಸನ್ಮಾನ್ಯ ಅಧ್ಯಕ್ಷಣೆಯವರೇ, ನಾನು ಈವರೆಗೆ ರಾಮನಗರ ತಾಲ್ಲೂಕಿನಲ್ಲಿ ಕರಡಿಗಳ ಹಾವಳಿಯಿಂದ ಎಷ್ಟು ಜನರಿಗೆ ಗಾಯಗಳಾಗಿವೆ ಎಂಬ ಪ್ರಶ್ನೆ ಕೇಳಿದೆ. ಅಧಿಕಾರಿಗಳು ಮಂತ್ರಿಗಳ ಮೂಲಕ ಬಹಳ ಬುದ್ಧಿವಂತಿಕೆಯಿಂದ ಕೇವಲ ೧೯೯೧-೯೨ನೇ ಸಾಲಿನದು ಮಾತ್ರ ಹೇಳಿದ್ದಾರೆ. ಬಹುಶಃ ಹಿಂದಿನಿಂದ ಎಷ್ಟು ಜನರಿಗೆ ಅದರ ಆಕ್ರಮಣದಿಂದ ತೊಂದರೆಯಾಗಿದೆಯೆಂದು ಹೇಳಿದ್ದರೆ ಪರಿಹಾರ ಕೊಟ್ಟಂಥ ಸಂಖ್ಯೆ ಬಹಳ ಕಡಿಮೆಯಾಗುತ್ತಿತ್ತು.